# ನವಿಲುಗನ್ನಡಿ

- ಸುಂದರವಾದ ಮುಖಪುಟದೊಂದಿಗೆ ನವೆಂಬರ್ 'ಮಯೂರ' ಕೈ ಸೇರಿತು. ಮಕ್ಕಳ ಸಂಭ್ರಮ, ಕನ್ನಡದ ಸಂಭ್ರಮ, ಎಸ್.ಎಲ್. ಭೈರಪ್ಪನವರ ನೆನಪುಗಳ ಲೇಖನಗಳ ಮಾಲೆ ಮನ ಸೆಳೆಯಿತು. ಮಕ್ಕಳ ವಿಶೇಷ ಸಂಚಿಕೆ ಸೊಗಸಾಗಿ ಮೂಡಿ ಬಂದಿದೆ. ಮಕ್ಕಳ ಮನೋಲೋಕ ಬೆಳಗುವ ಪುಸ್ತಕಗಳ ಪರಿಚಯ ಮೌಲಿಕ ಮತ್ತು ಮಾಹಿತಿ ಪೂರ್ಣವಾಗಿದೆ. ಸಂಗ್ರಹ ಯೋಗ್ಯವಾದ ಸಂಚಿಕೆ ನೀಡಿದ 'ಮಯೂರ'ಕ್ಕೆ ಧನ್ಯವಾದಗಳು.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

- ನವೆಂಬರ್ ತಿಂಗಳ 'ನಂದಾದೀಪ'ದಲ್ಲಿ ಎಸ್.ಎಲ್. ಭೈರಪ್ಪನವರ ಕುರಿತ ಬರಹ ಎಂದೂ ಆರದ ದೀಪದಂತೆ ಕಂಡಿತು. ಕೃಷ್ಣಮೂರ್ತಿ ಹನೂರು ಮತ್ತು ಎಂ.ಆರ್. ದತ್ತಾತ್ರಿ ಬರಹಗಳನ್ನು ಓದಿದಾಗ ಭೈರಪ್ಪನವರ ಬದುಕೇ ಒಂದು ಕಥೆಯಂತೆ ಕಂಡಿತು. ಅವರೊಬ್ಬ ಕಾರುಣ್ಯಮಯಿ ಬರಹಗಾರರು ಎಂಬುದೂ ಖಚಿತವಾಯಿತು.

**ಶಂಕರನಾರಾಯಣ ಭಟ್, ಮಾಡಗೇರಿ,**
**ಹೊನ್ನಾವರ, ರವಿ ಯಲಿಗಾರ, ಮುನವಳ್ಳಿ**

- 'ಟೇಲರ್ ಬಾನಣ್ಣ ಹೊಲಿದ ಬಣ್ಣದ ಬಟ್ಟೆ' (ಸುನಂದಾ ಕಡಮೆ) ತುಂಬಾ ಸೊಗಸಾಗಿದೆ. ಮಕ್ಕಳ ಶಿಕ್ಷಣದ ಮಹತ್ವ ಸಾರುವ ಕಥೆಯಲ್ಲಿ ಪರಿಸರದ ಪಾಠವೂ ಇದೆ.

**ಶತಭಿಷ ಸುರಾನ ಪ್ರಸಾದ್, ಕುಣಿಗಲ್**

- ತಾವು ನಂಬಿದ ಮೌಲ್ಯಗಳೊಡನೆ ಬದುಕಿ, ಕಥೆ– ಕಾದಂಬರಿಗಳ ಮೂಲಕ ಸ್ತ್ರೀವಾದಿ ಆಲೋಚನೆಗಳನ್ನು ಪ್ರಚುರ ಪಡಿಸಿದ ಲೇಖಕಿ ವೀಣಾ ಶಾಂತೇಶ್ವರ ಅವರೊಂದಿಗಿನ ಗೀತಾ ವಸಂತ ಅವರ ಮಾತುಕತೆ ಆಪ್ತವೆನಿಸಿತು. ಸೃಜನಶೀಲ ಬರವಣಿಗೆಯ ಮೌನಕ್ಕೆ ಹೇಳಿದ ನಿಜವಾದ ಕಾರಣ ಸತ್ಯವೆನಿಸಿತು. ಆದಷ್ಟು ಬೇಗ ನಿರೀಕ್ಷೆಯಂತೆ ವೀಣಾ ಶಾಂತೇಶ್ವರ ಅವರ ಕೃತಿಗಳು ಹೊರಹೊಮ್ಮಲಿ. ನಾಡಿನ ಜನತೆಯ ಮನವನ್ನು ತಣಿಸಲಿ.

**–ಸತೀಶ ಎಚ್.ಆರ್., ಕಳಸ, ಚಿಕ್ಕಮಗಳೂರು**




- ಕಥೆಗಾರ್ತಿ ವೀಣಾ ಶಾಂತೇಶ್ವರ ಅವರೊಂದಿಗೆ ಲೇಖಕಿ ಗೀತಾ ವಸಂತ ನಡೆಸಿದ ಮಾತುಕತೆ ಸ್ತ್ರೀವಾದಿಯ ವಿವಿಧ ನೆಲೆಗಳ ಕುರಿತು ಚರ್ಚಿಸಿದೆ. ವೀಣಾ ಅವರ ಹೋರಾಟದ ಜೀವನದ ಓದು ಸ್ಫೂರ್ತಿದಾಯಕವಾದುದು.

**ಸಲೀಂ ಸುಳ್ಯ, ಕನ್ನಡ ಅಧ್ಯಯನ ಸಂಸ್ಥೆ,**
**ಮಂಗಳೂರು ವಿ.ವಿ**

- ಮೂಲತಃ ಕವಿಗಳಾಗಿರುವ ಚಂದ್ರಶೇಖರ ತಾಳ್ಯ ಮತ್ತು ಪ್ರತಿಭಾ ನಂದಕುಮಾರ ಅವರ 'ಮೀನಾಕ್ಷಿ' ಮತ್ತು 'ಸರ್ಕಲ್ ವೃತ್ತಾಂತ' ಕಥೆಗಳು ಓದಿಸಿಕೊಂಡವು. ಎರಡೂ ಕಥೆಗಳೂ ಭಿನ್ನ ಭಿನ್ನ ಆಲೋಚನೆಗಳಿಂದ ಕಳೆಗಟ್ಟಿವೆ.

**ಡಿ. ರಾಮನಮಲಿ, ಹರಪನಹಳ್ಳಿ**

- ಮೊಗಳ್ಳಿ ಗಣೇಶ್ ಅವರ 'ದ ಲಾಸ್ಟ್ ಸಪ್ಪರ್' ಕಥೆ ಸಾವಿನ ಸಿದ್ಧಾಂತದ ಪರಿಧಿಯಲ್ಲಿ ಬೆಳೆಯುತ್ತಾ ಚಿಂತನೆಗೆ ಎಡೆಮಾಡಿಕೊಟ್ಟಿತು. ಕಾಲು ಮುರಿದುಕೊಂಡ ಬಡಪಾಯಿ, ಅವನಿಗೆ ಸಹಾಯ ಮಾಡಿದ ಸೆಕ್ಯೂರಿಟಿ ಗಾರ್ಡ್ ಮತ್ತು ಹೆಣ ಸಾಗಿಸುವ ವಾಹನದ ಚಾಲಕ ಇವುಗಳ ಸುತ್ತ ಹಲವು ಗುಟ್ಟುಗಳನ್ನು ವೈಚಾರಿಕ ನೆಲೆಯಲ್ಲಿ ಬಿಡಿಸಲು ಲೇಖಕರು ಪ್ರಯತ್ನಿಸಿದ್ದಾರೆ.

**ಸು.ರಾ. ನರಸಿಂಹಪ್ರಸಾದ್, ಕುಣಿಗಲ್**